ಶ್ರೀ ಎಸ್. ಆರ್. ಮೋರೆ.—ಶಸ್ತ್ರ ಚಿಕಿತ್ಸೆ ಘಟಕ ಅಲ್ಲಿ ದುರಸ್ಥಿಯಲ್ಲಿದೆ. ಧಾರವಾಡದಲ್ಲಿ60-70 ಸಾವಿರ ಜನಸಂಖ್ಯೆ ಇರತಕ್ಕ ಸಂದರ್ಭದಲ್ಲಿ ಜಿಲ್ಲಾ ಆಸ್ಪತ್ರೆ ಕಟ್ಟಿಸಿದ್ದು, ಈಗ ಎರಡು ಲಕ್ಷ ಜನಸಂಖ್ಯೆ ಇದೆ. ಆದುದರಿಂದ 250 ಹಾಸಿಗೆಗೆ ಅನುಕೂಲ ಮಾಡಿ, ಸಂದರ್ಶಕರ ಸಮಿತಿ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಸ್ಪತ್ರೆಯಲ್ಲಿರತಕ್ಕ ಶಸ್ತ್ರಚಿಕಿತ್ಸೆ ಘಟಕ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರ ದುರಸ್ಥಿಗಾಗಿ ಕ್ರಮ ತೆಗೆದುಕೊಳ್ಳಲಾಗಿದೆ. 19-2-82ರಲ್ಲಿ ಶಿವಮೊಗ್ಗದಲ್ಲಿ ನಡೆದಂಥ ಮಂತ್ರಿಮಂಡಲದ ಸಭೆಯಲ್ಲಿ 250 ಹಾಸಿಗೆಗಳಿಗೆ ವಿಸ್ತರಿಸುವ ತೀರ್ಮಾನವನ್ನು ಸರ್ಕಾರ ಮಾಡಿದೆ. ಆದರ ಬಗ್ಗೆ ಇಲಾಖೆ ಕೆಲಸ ನಡೆಸುತ್ತದೆ. ಧಾರವಾಡ ಆಸ್ಪತ್ರೆಗೆ ಮಾತ್ರವಲ್ಲ; ಇಡೀ ರಾಜ್ಯದಲ್ಲಿರತಕ್ಕ ಎಲ್ಲಾ ಆಸ್ಪತ್ರೆಗಳಿಗೂ ಸಂಬಂಧಪಟ್ಟಂತೆ ಸಂದರ್ಶಕ ಮಂಡಲಿಯನ್ನು ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಕೂಡಲೇ ಸಂದರ್ಶಕರ ಮಂಡಲಿಯನ್ನು ರಚನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹುಬ್ಬಳ್ಳಿಯಲ್ಲಿರುವ ಕೆ. ಎಂ. ಸಿ. ಆಸ್ಪತ್ರೆಗೆ ಕಳೆದ ಮೂರು ವರ್ಷದಿಂದಲೂ ಸಂದರ್ಶಕ ಮಂಡಲಿಯನ್ನು ನೇಮಕ ಮಾಡಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಇದು ಉತ್ತರವೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಕಡೆ ಆದಷ್ಟು ಬೇಗ ಮಾಡುತ್ತೇವೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ತಾವು ಕೆಥೆ ಹೇಳುತ್ತೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರುಗಳ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದೇನೆ. ನಾನು ಮಂತ್ರಿಯಾದ ಮೇಲೆ ಅಧಿಕಾರಿಗಳನ್ನು ಕರೆಸಿ ವಿಚಾರಿಸಲಾಗಿ ಅನೇಕ ಆಸ್ಪತ್ರೆಗಳಲ್ಲಿ ಸಂದರ್ಶಕರ ಮಂಡಲಿಗಳನ್ನು ಅನೇಕ ವರ್ಷಗಳಿಂದ ಮಾಡಿಲ್ಲ ಎಂದು ಗೊತ್ತಾಯಿತು. ಅದಕ್ಕೆ ಕಾರಣ ಕೂಡ ನನಗೆ ಗೊತ್ತಿಲ್ಲ. ಸಂಬಂಧಪಟ್ಟ ಹೆಸರುಗಳನ್ನು ತರಿಸಿಕೊಂಡು ಇನ್ನು 15 ದಿವಸಗಳಲ್ಲಿ ಸಂದರ್ಶಕ ಮಂಡಲಿಗಳನ್ನು ಪುನರ್‌ರಚನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಮಂಗಳೂರು ನಗರ ಪಡಿತರ ಪ್ರದೇಶದಲ್ಲಿ ಕುಸುಬಲು ಅಕ್ಕಿಯ ವಿತರಣೆ ಬಗ್ಗೆ

172. ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಮಂಗಳೂರು ನಗರ ಪಡಿತರ ಪ್ರದೇಶದಲ್ಲಿ ಉತ್ತಮ ದರ್ಜೆಯ ಕುಚ್ಚಿಗೆ (ಬಾಯಿಲ್ಡ್) ಅಕ್ಕಿ ಸರಾಗವಾಗಿ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಅಧ್ಯಕ್ಷರೆ, ಈ ವಿಷಯದ ಬಗ್ಗೆ ಈಗಾಗಲೇ ಸದನದಲ್ಲಿ ಚರ್ಚೆಯಾಗಿದೆ. ದಿನಾಂಕ 5-4-1983ರಂದು ಸೆಕ್ರೆಟರಿಯವರನ್ನು, ಮತ್ತು ಅದರ ಜೊತೆಗೆ ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಅವರನ್ನು ಕರೆದುಕೊಂಡು ಹೋಗುತ್ತೇನೆ. ಎಲ್ಲಾ ಶಾಸಕರನ್ನು ಜಿಲ್ಲಾಧಿಕಾರಿಗಳವರ ಕಛೇರಿಯಲ್ಲಿ ಕರೆಸಿ ಭೇಟಿ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ. ಅಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳುವುದಕ್ಕೆ ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದರ ಬಗ್ಗೆ ನಾನು ಈಗಾಗಲೇ ಸೂಕ್ತ ಕ್ರಮ ತೆಗೆದುಕೊಂಡಿದ್ದೇನೆ. ಇದರ ಬಗ್ಗೆ ಈಗಾಗಲೇ ಈ ಸದನದಲ್ಲಿ ಸುದೀರ್ಘವಾಗಿ ಚರ್ಚೆ ನಡೆದಿದೆ. ಮಾನ್ಯ ಸದಸ್ಯರು ಇದರ ಬಗ್ಗೆ ಮತ್ತೆ ಒತ್ತಾಯಿಸುವುದು ಬೇಡ.

ಶ್ರೀ ವಿ. ಧನಂಜಯಕುಮಾರ್.—ಅಧ್ಯಕ್ಷರೇ, 5 ಸಾವಿರ ಕ್ವಿಂಟಾಲ್ ಅಕ್ಕಿಯನ್ನು ಕೂಡಲೇ ಕಳುಹಿಸಿ ಕೊಟ್ಟಿದ್ದೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಅಲ್ಲಿ ಇನ್ನೂ ಅಕ್ಕಿ ಬಂದಿಲ್ಲ ಎಂದು ಹೇಳುತ್ತಿದ್ದಾರೆ.

Sri G. Basavannappa .— We have already released 5000 quintals of rice. The Deputy Commissioner of South Kanara has to lift from Shimoga and Dharwad.

ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಉಚ್ಚ ನ್ಯಾಯಾಲಯದ ಪೀಠ ಸ್ಥಾಪಿಸುವ ಬಗ್ಗೆ

173. ಶ್ರೀ ಎಂ.ಜಿ.ಜರತಾರಗರ್ (ಹುಬ್ಬಳ್ಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿ

ಗಳು ಉತ್ತರಿಸುವರೇ ?

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪಿಸು ಬಗ್ಗೆ ಧಾರವಾಡ ನ್ಯಾಯವಾದಿಗಳ ಸಂಘದ ಸಭೆಯಲ್ಲಿ ಎರಡು ವರ್ಷಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದು ಸರಕಾರದವರ ಗಮನಕ್ಕೆ ಬಂದಿದೆಯೇ ;

ಆ) ಬೆಳಗಾವಿ, ಕಾರವಾರ, ವಿಜಾಪುರ, ಧಾರವಾಡ. ರಾಯಚೂರ ಮತ್ತು ಬಳ್ಳಾರಿ ಜಿಲ್ಲೆಗಳ ನಾಗರೀಕರಿಗೆ ಬೆಂಗಳೂರಿನಲ್ಲಿರುವ ಉಚ್ಚ ನ್ಯಾಯಾಲಯಕ್ಕೆ ಆಗಾಗ್ಗೆ ಹೋಗಿ ಬರಲು ಆರ್ಥಿಕ ದೃಷ್ಟಿಯಿಂದ ಅನಾನುಕೂಲವೆಂಬುದು ಸರಕಾರದವರಿಗೆ ತಿಳಿದಿದೆಯೇ ;

ಇ) ಈ ಉಚ್ಚ ನ್ಯಾಯಾಲಯದಲ್ಲಿರುವ ಮೇಲ್ಕಂಡ ಜಿಲ್ಲೆಗಳ ಒಟ್ಟು ಪ್ರಕರಣಗಳೆಷ್ಟು ;

ಈ) ಆರ್ಥಿಕ ಹಾಗೂ ಹಿಂದುಳಿದ ಈ ಮೇಲಿನ ಜಿಲ್ಲೆಗಳ ರೈತರ ಅನುಕೂಲತೆಗಾಗಿ ಉಚ್ಚ ನ್ಯಾಯಾಲಯದ ಪೀಠವನ್ನು ಹುಬ್ಬಳ್ಳಿ ಧಾರವಾಡದಲ್ಲಿ ಸ್ಥಾಪಿಸುವುದು ಸರಕಾರದ ವಿಚಾರದಲ್ಲಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು) :—

ಅ) ಮುಖ್ಯಮಂತ್ರಿಗಳು ಕೊಟ್ಟ ಆಶ್ವಾಸನೆಯ ಬಗ್ಗೆ ಏಚಿತ ಮಾಹಿತಿಯು ಸದ್ಯಕ್ಕೆ ಸರ್ಕಾರದ ಬಳಿಯಲ್ಲಿಲ್ಲ.

ಆ) ತಿಳಿದಿದೆ.

ಇ) ಈ ಮಾಹಿತಿಯನ್ನು ಕರ್ನಾಟಕದ ಉಚ್ಚ ನ್ಯಾಯಾಲಯದಿಂದ ತರಿಸಬೇಕಾಗಿರುವುದರಿಂದ, ಉಚ್ಚ ನ್ಯಾಯಾಲಯಕ್ಕೆ ಈ ಸಂಬಂಧದಲ್ಲಿ ಕೇಳಿದ್ದು, ಅವರು ಈ ವಿವರಣೆಯನ್ನು ಒದಗಿಸಲು ಹೆಚ್ಚು ಕಾಲಾವಕಾಶ ಬೇಕೆಂದು ಕೇಳಿದ್ದಾರೆ.

ಈ) ಹುಬ್ಬಳ್ಳಿ ಧಾರವಾಡದಲ್ಲಿ ಉಚ್ಚ ನ್ಯಾಯಾಲಯದ ಪೀಠವೊಂದನ್ನು ಸ್ಥಾಪಿಸುವ ವಿಚಾರವು ಕೇಂದ್ರ ಸರ್ಕಾರದ ಮುಂದಿದೆ.

ಶ್ರೀ ಎಂ. ಜಿ. ಜರತಾರ್‌ಗರ್.—ಅಧ್ಯಕ್ಷರೆ, ನನ್ನ ಪ್ರಶ್ನೆಗಳಿಗೆ ಸರ್ಕಾರದಿಂದ ಸರಿಯಾದ ಉತ್ತರ ಬಂದಿಲ್ಲ. ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪಿಸುವ ಬಗ್ಗೆ ಜನತಾ ಸರ್ಕಾರದ ನಿಲುವು ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ರಾಜ್ಯ ಸರ್ಕಾರ ಕೇಂದ್ರಸರ್ಕಾರಕ್ಕೆ ಒಂದು ಉಚ್ಚ ನ್ಯಾಯಾಲಯ ಪೀಠವನ್ನು ಸ್ಥಾಪಿಸುವ ಬಗ್ಗೆ ಪತ್ರ ಬರೆಯಲಾಗಿದೆ. ಕೇಂದ್ರಸರ್ಕಾರದ ಮಂತ್ರಿಗಳು ಕೆಲವು ವಿವರಣೆಗಳನ್ನು ಕೇಳಿದ್ದಾರೆ. ರಾಜ್ಯ ಸರ್ಕಾರ ಆ ಬಗ್ಗೆ ಹೈಕೋರ್ಟ್‌ನಿಂದ ವಿವರಗಳನ್ನು ಕೇಳಿದೆ. ರಾಜ್ಯ ಹೈಕೋರ್ಟ್‌ನಿಂದ ಪೂರ್ಣ ವಿವರಣೆ ಬಂದಮೇಲೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಚಿಮ್ಮನಕಟ್ಟಿ.—ಕಳೆದ ವರ್ಷ ಹೈಕೋರ್ಟ್ ಚೀಫ್ ಜಸ್ಟಿಸ್ ಚಂದ್ರಲೇಖಿರ್ ಅವರು ಧಾರವಾಡಕ್ಕೆ ಹೋಗಿ ಸ್ಥಳ ವೀಕ್ಷಣೆ ಮಾಡಿ ಕೇಂದ್ರ ಸರ್ಕಾರಕ್ಕೆ ಒಂದು ವರದಿ ಕಳುಹಿಸಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರದಿಂದ ಪತ್ರ ಹೋಗಿದೆ. Further developments ಏನಾಗಿದೆ ಸ್ಪಷ್ಟವಾಗಿ ತಿಳಿಸಬೇಕು. ಮಾನ್ಯ ಮಂತ್ರಿಗಳು ಅದೇ ಭಾಗದಿಂದ ಛಂದಿರುವವರು; ಬಹಳ ಧೈರ್ಯ ಮಾಡಿ ಒಂದು ನಿರ್ದಿಷ್ಟವಾದ ಉತ್ತರವನ್ನು ಹೇಳಬೇಕು. ಅಲ್ಲಿ ಹೈಕೋರ್ಟ್ ಬೆಂಚ್ ಸ್ಥಾಪನೆ ಮಾಡಬೇಕೆಂದು ನಾಲ್ಕಾರು ಜಿಲ್ಲೆಗಳ ಅಪೇಕ್ಷೆ ಇದೆ. ಹೈಕೋರ್ಟಿನಲ್ಲಿರತಕ್ಕ ಪೆಂಡಿಂಗ್ ಕೇಸುಗಳು ಲೇಕಡ 60 ಭಾಗ ಆ ಪ್ರದೇಶದಿಂದ ಬಂದಿರುವುದರಿಂದ, ಭಯಂಕರ ತೊಂದರೆ ಇದೆ. ಅದಕ್ಕೋಸ್ಕರ ತಮ್ಮ ಕಾಲದಲ್ಲಿಯಾದರೂ ಇದು ಆಗಬೇಕು. ಅದರಿಂದ ತಮಗೂ ಕ್ರೆಡಿಟ್ ಬರುತ್ತದೆ. ದಯಮಾಡಿ ಮಾನ್ಯ ಮಂತ್ರಿಗಳು ಸಮಾಧಾನಕರವಾದ ಉತ್ತರ ಕೊಡಬೇಕು.

ಶ್ರೀ ಧರ್ಮಸಿಂಗ್.—ಜನತಾ ಸರ್ಕಾರದಲ್ಲಾದರೂ ಬದಲಾವಣೆಯಾಗುವಂಥಾದ್ದು ಆಗಬೇಕು.

ಶ್ರೀ ಭೀಮಣ್ಣ ಖಂಡ್ರೆ.—ಗುಲ್ಬರ್ಗ, ಬೀದರ್ ಕೇಸಸ್ ಎಷ್ಟು ಇವೆ ನೋಡಿ. ಗುಲ್ಬರ್ಗದಲ್ಲಿ ಹೈಕೋರ್ಟ್ ಬೆಂಚ್ ತೆರೆಯುವುದಕ್ಕೆ ವಿಚಾರ ಮಾಡಬೇಕು.

ಶ್ರೀ ಎಂ. ಜಿ. ಜರತಾರ್‌ಗರ್.—ಸುಮಾರು 79 ಸಾವಿರ ಕೇಸುಗಳು ಪೆಂಡಿಂಗ್ ಉಳಿದಿರುವುದರಿಂದ ಆದಷ್ಟು ಬೇಗ ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಹೈಕೋರ್ಟ್ ಬೆಂಚ್ ಸ್ಥಾಪಿಸುತ್ತೀರಾ ?

ಶ್ರೀ ದೇಸಾಯ್.—ಉಚ್ಚನ್ಯಾಯಾಲಯ ಪೀಠವನ್ನು ಗುಲ್ಬರ್ಗದಲ್ಲೂ ಸ್ಥಾಪಿಸಬೇಕು ಎನ್ನುವ ವಿಚಾರ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರೆಕಾರ್ಡ್‌ನಲ್ಲಿ ಗುಲ್ಬರ್ಗದಲ್ಲಿ ಉಚ್ಚ ನ್ಯಾಯಾಲಯ ಸ್ಥಾಪನೆ ಮಾಡುವ ಬಗ್ಗೆ ಮನವಿ ಬಂದಿರುವುದು ಇಲ್ಲ. ಇನ್ನು ಮಾನ್ಯ ಜರತಾರ್‌ಗರ್ ಪ್ರಶ್ನೆಗೆ ಎಷ್ಟು ಕೇಸಸ್ ಇವೆ ಆ ಅಂಕಿಸಂಖ್ಯೆ ಬಗ್ಗೆ ಹೈಕೋರ್ಟಿಗೆ ಬರೆದಿದ್ದೇವೆ. ಇನ್ನೂ ಉತ್ತರ ಬಂದಿಲ್ಲ. ಸಮಯ ಬೇಕೆಂದು ಹೇಳಿದ್ದಾರೆ. ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಉಚ್ಚ ನ್ಯಾಯಾಲಯ ಪೀಠವನ್ನು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ವಿಚಾರ ಮಾಡುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಹಿಂದಿನ ಸರ್ಕಾರ ನಿಧಾನ ಮಾಡಿದೆ ಎಂದು ಈಗಿನ ಸರ್ಕಾರ ನಿಧಾನ

ಮಾಡದೆ ಬೇಗ ಮಾಡುತ್ತದೆಯೇ ;

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಂದ್ರ ಸರ್ಕಾರ ಕೆಲವೊಂದು ಮಾಹಿತಿಗಳನ್ನು ಕೇಳಿರುವುದರಿಂದ, ನಮ್ಮ ಸರ್ಕಾರ ಹೈಕೋರ್ಟ್‌ಗೆ ಕೆಲವು ಮಾಹಿತಿಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡಿದೆ.

ಗಜೇಂದ್ರಗಡದ ಆಸ್ಪತ್ರೆಗೆ ಅಡಿಗಲ್ಲು ಹಾಕಿರುವ ಬಗ್ಗೆ

174. ಶ್ರೀ ಜ್ಞಾನದೇವ ದೊಡ್ಡ ಮೇಟಿ(ರೋಣ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :

ಅ) ಧಾರವಾಡ ಜಿಲ್ಲೆ ರೋಣ ತಾಲ್ಲೂಕು ಗಜೇಂದ್ರಗಡದ ನಗರದಲ್ಲಿ ಆಸ್ಪತ್ರೆಯ ಕಟ್ಟಡಕ್ಕೆ ಹಿಂದಿನ ಸಚಿವರೊಬ್ಬರು ಅಡಿಗಲ್ಲನ್ನು ಇಟ್ಟಿದ್ದು ನಿಜವೇ ;

ಆ) ಹಾಗಿದ್ದಲ್ಲಿ ಸದರಿ ಆಸ್ಪತ್ರೆಯ ಕಟ್ಟಡ ಕಟ್ಟಲು ಪ್ರಾರಂಭಿಸದಿರುವುದಕ್ಕೆ ಕಾರಣಗಳೇನು ;

ಇ) ಈಗಲಾದರೂ ಈ ಕಟ್ಟಡದ ಕೆಲಸವನ್ನು ಬೇಗ ಪೂರ್ತಿಗೊಳಿಸಲು ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳುವರೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು):--

ಅ) ಹೌದು.

ಆ) ಅಗತ್ಯವಾದ ಕ್ರಮಗಳು ಪೂರ್ತಿಗೊಳ್ಳದಿರುವುದರಿಂದ.

ಇ) ಹೌದು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಅಧ್ಯಕ್ಷರೆ, ನಾನು ಕೇಳಿರುವೆದು ಅಡಿಗಲ್ಲನ್ನು ನೆಟ್ಟಿದ್ದು ನಿಜವೇ ಎಂದು. ಆದರೆ ಪ್ರಶ್ನೋತ್ತರ ಪಟ್ಟಿಯಲ್ಲಿ ಇಟ್ಟಿದ್ದು ನಿಜವೇ ಎಂದು ಮುದ್ರಣವಾಗಿದೆ. ನೆಟ್ಟಿದ್ದು, ಮತ್ತು ಇಟ್ಟಿದ್ದು ಎನ್ನುವುದಕ್ಕೆ ಅರ್ಥವ್ಯತ್ಯಾಸವಾಗುತ್ತದೆ. ಗಿಡ, ಸಸಿ, ಇವುಗಳು ನೆಡುವಂಥಾದ್ದು. ಅಡಿಗಲ್ಲನ್ನು ನೆಡುವುದು ಎಲ್ಲಿ ಕಾಣಲಿಲ್ಲ. ಈ ಆಸ್ಪತ್ರೆಯ ಕಟ್ಟಡಕ್ಕೆ ಅಡಿಗಲ್ಲು ಏನು ಇಟ್ಟಿದ್ದಾರೆ, ಇದನ್ನು ನೆಲದ ಮೇಲೆ ಇಟ್ಟಿದ್ದಾರೋ, ಅಥವಾ ಇದು ನೆಲದ ಕೆಳಕ್ಕೆ ಸೇರಿದೆಯೋ ಹೇಗೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—1982ನೇ ಇಸವಿ 11ನೇ ತಿಂಗಳಿನಲ್ಲಿ ಹಿಂದಿನ ಆರೋಗ್ಯ ಮಂತ್ರಿಗಳು ಈ ಅಡಿಗಲ್ಲನ್ನು ಹಾಕಿದ್ದಾರೆ. ಕಳೆದ ಬಜೆಟ್‌ನಲ್ಲಿ 2 ಲಕ್ಷ ರೂಪಾಯಿ ಇಟ್ಟಿದ್ದರೂ ಅದನ್ನು ಉಪಯೋಗಿಸಿಕೊಂಡಿಲ್ಲ. ಈ ವರ್ಷದ ಬಜೆಟ್‌ನಲ್ಲಿ ಇದಕ್ಕೋಸ್ಕರ ಐದೂವರೆ ಲಕ್ಷ ರೂಪಾಯಿ ಇಟ್ಟಿದ್ದೇವೆ. ಅತಿ ಶೀಘ್ರದಲ್ಲಿಯೇ ಈ ಆಸ್ಪತ್ರೆಯ ಕೆಲಸ ಪ್ರಾರಂಭ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಇಷ್ಟು ವಿಳಂಬ ಆಗಲಿಕ್ಕೆ ಕಾರಣ ಏನು ಎನ್ನುವುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಸ್ವಾಮಿ, ಇದು ತಡವಾಗುವುದಕ್ಕೆ ಕಾರಣವಾದರೂ ಏನು ? ನಮಗೆ ಎಲ್ಲ ವಿಚಾರವೂ ಗೊತ್ತಿದೆ. ಆದ್ದರಿಂದ ತಾವು ವಿಚಾರ ಏನೆಂಬುದನ್ನು ಹೇಳಿದರೆ ಸಾಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹೋದ ವರ್ಷದ ಆಯವ್ಯಯದಲ್ಲಿ ಈ ಬಾಬಿಗೋಸ್ಕರ 2 ಲಕ್ಷ ರೂ ಇಟ್ಟಿದ್ದಾರೆ. ಇದರ ಬಗ್ಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಪ್ರೊಸೆಸಿಂಗ್ ಆಗಬೇಕಾದರೆ ಸ್ವಲ್ಪ ತಡವಾಗಿದೆ. ಈ ವರ್ಷದಲ್ಲಿ ನಾವು 5.50 ಲಕ್ಷ ರೂ. ಇಟ್ಟಿದ್ದೇವೆ. ಆದಷ್ಟು ಶೀಘ್ರವಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಸ್ವಾಮಿ, ಅಲ್ಲಿ ನೆಲದ ತೊಡಕು ಇದೆ. ಆದರೂ ಈ ಅಡಿಗಲ್ಲನ್ನು ಏತಕ್ಕೆ ಇಟ್ಟರು ? ಆ ಜಮೀನಿನ ಬಗ್ಗೆ ತಕರಾರು ಇದ್ದುದು ನಿಮಗೆ ಗೊತ್ತಿರಲಿಲ್ಲವೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆ ಜಮೀನಿನ ವಿಚಾರದಲ್ಲಿ ತೊಡಕು ಇದ್ದುದು ನಮ್ಮ ಗಮನಕ್ಕೆ ಬಂದಿರಲಿಲ್ಲ. ಈಗ ತಾವು ನಮ್ಮ ಗಮನಕ್ಕೆ ತಂದಿದ್ದೀರಿ. ಈ ದಿಸೆಯಲ್ಲಿ ನಾವು ತೀವ್ರ ಕ್ರಮ ತೆಗೆದುಕೊಂಡು ಸಮಸ್ಯೆಯನ್ನು ಪರಿಹಾರಮಾಡುತ್ತೇವೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಇನ್ನು ಮುಂದಾದರೂ ನಮ್ಮ ಸರ್ಕಾರ ಇಂಥ ಅಡಿಗಲ್ಲು ಸಮಾರಂಭಗಳನ್ನು ಮಾಡುವುದಾಗಲಿ, ಅಥವಾ ಇಂಥ ಅರ್ಧಂಬರ್ಧ ಕೆಲಸವನ್ನು ಮಾಡುವುದಾಗಲಿ, ಮಾಡಬಾರದೆಂದು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಗಬಹುದು.

ರಾಜ್ಯದಲ್ಲಿ ವೈದ್ಯಕೀಯ ಕಾಲೇಜುಗಳ ಬಗ್ಗೆ

175. ಶ್ರೀ ರಾಮಚಂದ್ರ ವೀರಪ್ಪ(ಹುಲಸೂರು).— ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಸರಕಾರದಿಂದ ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳು ಎಷ್ಟು, ಪೆಸರೇನು ಮತ್ತು ಎಲ್ಲಿ ಇರುತ್ತವೆ ;